ಬೆಳಗಾಂವ ಜಿಲ್ಲೆ ಸೌದತ್ತಿ ತಾಲ್ಲೂಕು ಹೈಕಿ ಚಚ್ಚಡಿ ಗ್ರಾಮದಲ್ಲಿ ಅಂಬರ ಚರಕಾ ಕೇಂದ್ರ ತೆರೆಯುವುದು

೮೮೩ (೨೪೯೯) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಬಂದರು ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಬೆಳಗಾಂ ಜಿಲ್ಲೆಯ ಸೌದತ್ತಿ ತಾಲ್ಲೂಕು ಚಚ್ಚಡಿ ಗ್ರಾಮದಲ್ಲಿ ಅಂಬರ ಚರಕಾ ಕೇಂದ್ರವನ್ನು ತೆರೆಯುವ ಬಗ್ಗೆ ಸಾರ್ವಜನಿಕರಿಂದ ಮನವಿ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಆ ಕೇಂದ್ರ ತೆರೆಯಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ?

ಇ) ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕು ಲಿಂಗನಮಕ್ಕಿ ಗ್ರಾಮದಲ್ಲಿ ಉಪಯೋಗಕ್ಕೆ ಬಾರದಿರುವ ಅಂಬರ ಚರಕಗಳನ್ನು ಚಚ್ಚಡಿ ಗ್ರಾಮದಲ್ಲಿ ಒಂದು ಕೇಂದ್ರವನ್ನು ತೆರೆದು ಉಪಯೋಗಿಸ ಬೇಕೆಂದು ಮನವಿಗಳು ಬಂದಿದ್ದರೂ ಸದರಿ ಕೇಂದ್ರವನ್ನು ಸ್ಥಾಪಿಸಲು ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಬೆಳಗಾಂ ಜಿಲ್ಲೆಯಲ್ಲಿ ಅಲ್ಲಲ್ಲಿ ಅಂಬರ ಚರಕ ಕೇಂದ್ರಗಳನ್ನು ತೆರೆಯಲು ಸಾರ್ವಜನಿಕರು ಮುಂದೆ ಬಂದರೂ ಕೂಡಾ ಅಧಿಕಾರಿಗಳು ಸಹಕರಿಸುತ್ತಿಲ್ಲ ಎಂಬುದು ನಿಜವೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಬಂದರು ವಿಮಾನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಖಾದಿ ಆಯೋಗದ ನಿಯಮಾವಳಿಗಳ ಪ್ರಕಾರ ಆಯೋಗದ ಪ್ರಮಾಣ ಪತ್ರವಿಲ್ಲದೆ ಖಾದಿ ಕೇಂದ್ರಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಲು ಅವಕಾಶವಿಲ್ಲ. ಪ್ರಾರಂಭ ಮಾಡಬಯಸುವ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳು ಪ್ರಮಾಣ ಪತ್ರವನ್ನು ಪಡೆಯಬೇಕಾಗುತ್ತದೆ.

ಈ) ''ಇ'' ಗೆ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಖಾದಿ ಸಂಸ್ಥೆಗಳನ್ನು ಸ್ಥಾಪಿಸಲು ಸಾರ್ವಜನಿಕರು ಮುಂದೆ ಬಂದಲ್ಲಿ ಸೂಕ್ತ ಮಾರ್ಗ ದರ್ಶನ ನೀಡಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ನಿಜವಾಗಿ ಬಹಳ ಖೇದ ಆನಿಸುತ್ತದೆ. ಏಕೆಂದರೆ ಯಾವ ಪ್ರಕಾರವಾಗಿ ಅಧಿಕಾರಿಗಳು ಒಂದು ತಪ್ಪು ಮಾಹಿತಿಯನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದಾರೆ ಎನ್ನುವುದಕ್ಕಾಗಿ ನನ್ನ ಪ್ರಶ್ನೆ ಏನೆಂದರೆ ''ಬೆಳಗಾಂ ಜಿಲ್ಲೆಯ ಸೌದತ್ತಿ ತಾಲ್ಲೂಕು, ಚಚ್ಚಡಿ ಗ್ರಾಮದಲ್ಲಿ'' ಅಂಬರ ಚರಕಾ ಕೇಂದ್ರವನ್ನು ತೆರೆಯುವ ಬಗ್ಗೆ ಸಾರ್ವಜನಿಕರಿಂದ ಮನವಿ ಬಂದಿದೆಯೇ ? ಎಂದು ಕೇಳಿದಕ್ಕೆ ಉತ್ತರವಾಗಿ ''ಇಲ್ಲ'' ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂಗೆ ಬಂದಾಗ ಅಲ್ಲಿಯ ಸಾರ್ವಜನಿಕರು ಖಾದಿ ಕೇಂದ್ರವನ್ನು ತೆರೆಯಬೇಕು ಎಂದು ಹೇಳಿದರು. ಒಂದು ವೇಳೆ ಆದನ್ನು ತೆರೆಯಲಿಕ್ಕೆ ಆಗದಿದ್ದರೆ ಲಿಂಗನಮಕ್ಕಿ ಖಾದಿ ಕೇಂದ್ರವನ್ನು ಅಲ್ಲಿಗೆ ಸ್ಥಳಾಂತರಿಸಬೇಕು ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಶ್ರೀ. ಎಂ. ೧೩೮/೪೫ ಎಂ ಎಸ್ ಎಲ್/೧, ೮೮ ದಿನಾಂಕ ೯-೩-೮೮ ನೇ ತಾರೀಖಿನ ದಿವಸ ಖಾದಿ ಗ್ರಾಮೋದ್ಯೋಗಕ್ಕೆ ಇದರ ಬಗ್ಗೆ ಒಂದು ಕಾಗದವನ್ನು ಕೂಡಾ ಬರೆದಿದ್ದಾರೆ. ಅದು ಹಿಂದುಳಿದ ಪ್ರದೇಶ ಆದುದರಿಂದ ಅಲ್ಲಿ ಖಾದಿ ಉದ್ಯೋಗ ಕೇಂದ್ರವನ್ನು ತೆರೆಯಬೇಕು. ಮಾನ್ಯ ಕೆಂದಾಯ ಮಂತ್ರಿಗಳೂ ಕೂಡಾ ಈ ಬಗ್ಗೆ ಶಿಫಾರಸ್ಸು ಮಾಡಿದರು. ಇಷ್ಟೆಲ್ಲಾ ಮಾಡಿದುದು ಅಲ್ಲದೆ ಅಲ್ಲಿನ ಮಂಡಲದ ಮೂಲಕ ಪ್ರಧಾನಿಯವರಲ್ಲೂ ಕೂಡಾ ವಿನಂತಿಸಿಕೊಂಡಿದ್ದೇವೆ. ಕೊನೆಗೆ ಇಲ್ಲಿ ಉತ್ತರವನ್ನು ಏನು ಕೊಡುತ್ತಾರೆ ಎಂದರೆ ಮನವಿಗಳು ಬಂದಿಲ್ಲ ಎಂದು ಹೇಳುತ್ತಾರೆ.

ಉಪಾಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇಂಥ ತಪ್ಪು ಮಾಹಿತಿ ಕೊಟ್ಟಂಥ ಅಧಿಕಾರಿಗಳ ಮೇಲೆ ಮಾನ್ಯ ಮಂತ್ರಿಗಳು ಯಾವ ಪ್ರಕಾರವಾಗಿ ಕ್ರಮವನ್ನು ಕೈಗೊಳ್ಳುತ್ತಾರೆ ? ಅಲ್ಲಿನ ಸಾರ್ವಜನಿಕರಿಂದ ಮನವಿಗಳು ಬಂದರೆ ಅಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆಯಲಾಗುವುದೇ ?

ಶ್ರೀ ಎಂ. ರಘುಪತಿ.—ನನ್ನ ಉತ್ತರ ಇಷ್ಟೆ. ಚಚ್ಚಡಿ ಗ್ರಾಮದಲ್ಲಿ ಒಂದು ಖಾದಿ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಹೇಳಿದ್ದಾರೆ. ಆದಕ್ಕೆ ಅವರು ಈಗ ಯಾವುದಾದರೂ ಒಂದು ಸಂಸ್ಥೆಯಲ್ಲಿ ಅದರ ಬಗ್ಗೆ ನೋಂದಾಯಿಸಿಕೊಂಡರೆ ಆ ಸಂಸ್ಥೆಗಳ ಮೂಲಕ ತತ್‌ಕ್ಷಣ ಏರ್ಪಾಡು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೇನೆ, ಅದರಲ್ಲಿ ಏನು ಪ್ರಶ್ನೆ ಎಂದರೆ ''ಬೆಳಗಾಂ ಜಿಲ್ಲೆಯಲ್ಲಿ'' ಅಲ್ಲಲ್ಲಿ ಅಂಬರ ಚರಕ ಕೇಂದ್ರಗಳನ್ನು ತೆರೆಯಲು ಸಾರ್ವಜನಿಕರು ಮುಂದೆ ಬಂದರೂ ಕೂಡಾ ಅಧಿಕಾರಿಗಳು ಸಹಕರಿಸುತ್ತಿಲ್ಲ ಎಂಬುದು ನಿಜವೇ ಎಂಬ ಪ್ರಶ್ನೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿ ಕೆಲವೊಂದು ಅಧಿಕಾರಿಗಳು ಇದ್ದಾರೆ, ಅವರು ಒಂದು ರೀತಿಯಲ್ಲಿ ಚೈನ್ ಇದ್ದಹಾಗೆ. ಯಾರಾದರೂ ಈ ರೀತಿ ಖಾದಿ ಕೇಂದ್ರಗಳನ್ನು ತೆಗೆಯಬೇಕು ಎಂದು ಹೇಳಿದರೆ ಅದಕ್ಕೆ ಆ ಅಧಿಕಾರಿಗಳು ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ. ಖಾದಿ ಗ್ರಾಮೋದ್ಯೋಗ ತೆಗೆಯಲಿಕ್ಕೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಫಂಡ್ಸ್ ಬರುತ್ತದೆ ಎಂದು ಹೇಳಿದ್ದಾರೆ. ಆ ಅಧಿಕಾರಿಗಳ ಹೆಸರನ್ನು ಇಲ್ಲಿ ಹೇಳಬಾರದು. ಸೋಮಶೇಖರ್ ಎಂಬ ಒಬ್ಬ ಕೆ. ಎ. ಎಸ್. ಅಧಿಕಾರಿ ಇದ್ದಾರೆ, ಅವರು ಒಂದು ರೀತಿಯಲ್ಲಿ ಚೈನ್ ಇದ್ದಹಾಗೆ. ಖಾದಿ ಗ್ರಾಮೋದ್ಯೋಗ ನಮ್ಮಲ್ಲಿ ಬಾರದ ಹಾಗೆ ಅವರು ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿ ಗ್ರಾಮಾಣ ಪ್ರದೇಶದಲ್ಲಿ ಖಾದಿ ಕೇಂದ್ರಗಳನ್ನೆ ತೆಗೆಯಲಿಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಖಾದಿ ಆಯೋಗದ ನಿಯಮಾವಳಿಗಳ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಹೆಚ್ಚಿನ ಖಾದಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶವಾಗಿದೆ, ಇದಕ್ಕೆ ಅಂತ ಯಾವುದಾದರೂ ಅಡಚಣೆ ಬಂದರೆ ಮಾನ್ಯ ಶಾಸಕರು ನನ್ನ ಗಮನಕ್ಕೆ ತಂದರೆ ನಾವು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಇನ್ನು ಅಧಿಕಾರಿಗಳ ಬಗ್ಗೆ ಏನು ಹೇಳಿದ್ದಾರೆ, ಅಂಥಾದ್ದು ಏನಾದರೂ ಇದ್ದರೆ. ನನಗೆ ಅದನ್ನು ಅವರು ಬರೆದು ಕಳುಹಿಸಿದರೆ ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಸೆಂಬ್ಲಿಯಲ್ಲಿ ಓಪನ್ ಆಗಿ ಹೆಸರನ್ನು ಹೇಳಿದರೂ ಸಹ ಮತ್ತೆ ಏತಕ್ಕೆ ಅದನ್ನು ಬರೆದು ಕಳುಹಿಸಬೇಕು ?

ಕರ್ನಾಟಕದಲ್ಲಿ ಕೆ.ಇ.ಬಿ.ಗೆ ಕಾರ್ಖಾನೆಗಳಿಂದ ಬರಬೇಕಾದ ಬಾಕಿ ಹಣದ ವಿವರ ಕುರಿತಂ

884 (2713) ಶ್ರೀ ಗೋಪಾಲ ಮುಕುಂದ ಕಾನಡೆ (ಖಸಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಒಂದು ಲಕ್ಷ ರೂ.ಗಳಿಗಿಂತ ಹೆಚ್ಚಿಗೆ ಹಣ ತುಂಬಬೇಕಾದ ಖಾಸಗೀ ಉದ್ದಿಮೆಗಳು ಯಾವುವು ?(ಹೆಸರು ಹಾಗೂ ಹಣದ ವಿವರ ನೀಡುವುದು)

ಆ) ಸದರಿ ಉದ್ದಿಮೆಗಳು ಬಾಕಿ ಇಟ್ಟುಕೊಂಡಿರುವ ಹಣವೆಷ್ಟು (ಹೆಸರು, ಎಷ್ಟು ವರ್ಷದಿಂದ ಬಾಕಿ ಇರುವುದು ವಿವರ ನೀಡುವುದು)•

ಇ) ಈ ಉದ್ದಿಮೆದಾರರಿಗೆ ನೀಡುವ ವಿದ್ಯುತ್‌ನಲ್ಲಿ ಯೂನಿಟ್‌ಗೆ ವಿಧಿಸಿದ ಮತ್ತು ವಸೂಲಿ ಮಾಡುತ್ತಿದ್ದ ಹಣವೆಷ್ಟು? (ಉದ್ಯಮಾವಾರು ವಿವರ ನೀಡುವುದು)